ನಿಯಮ-330
ಕ್ರ - 68 ಕಂಪ್ಯೂಟರ್

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ರವರು ನಿಯಮ 330 ರಡಿ ನೀಡಿರುವ ಸೂಚನೆಗೆ ಮಾಹಿತಿ

### ಸೂಚನೆ

ಅ) ಕೋಲಾರ ಮತ್ತು ಚಿಕ್ಕಬಳ್ಳಾಪುರ ಡಿ.ಸಿ.ಸಿ ಬ್ಯಾಂಕ್‌ನಿ., ಇವರು ದಿನಾಂಕ:01.07.2021 ರಿಂದ ದಿನಾಂಕ:31.12.2021 ರಲ್ಲಿ ವಿ.ಎಸ್.ಎಸ್.ಎನ್ ಗಳಿಂದ ಮಹಿಳಾ ಸ್ವಸಹಾಯ ಸಂಘಗಳಿಗೆ ನೀಡಿದ ಸಾಲಗಳ ಮೇಲೆ ಹೆಚ್ಚುವರಿಯಾಗಿ ಬಡ್ಡಿ ಕ್ಲೇಮ್ ಮಾಡಿರುವುದು.

ಆ) ಕೋಲಾರ ಮತ್ತು ಚಿಕ್ಕಬಳ್ಳಾಪುರ ಡಿ.ಸಿ.ಸಿ ಬ್ಯಾಂಕ್ ನಿ., ಕೆ.ಜಿ.ಎಫ್ ಶಾಖೆಯಲ್ಲಿ 2019-20 ನೇ ಸಾಲಿನ ಪಶುಭಾಗ್ಯ ಯೋಜನೆಯಡಿಯಲ್ಲಿ ಫಲಾನುಭವಿಗಳ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಸಹಾಯಧನ ಹಣದಲ್ಲಿ ಅವ್ಯವಹಾರ ನಡೆಸಿರುವ ಬಗ್ಗೆ.

ಇ) ಸೆವೆನ್ ಸ್ಟಾರ್ ಬಳಕೆದಾರರ ಸಹಕಾರ ಸಂಘ ನಿಯಮಿತ,. ಬಂಗಾರಪೇಟೆ, ಇದರ ನೋಂದಣಿಗೆ ಸಂಬಂಧಪಟ್ಟಂತೆ ಸಂಪೂರ್ಣ ಮಾಹಿತಿ ನೀಡುವುದು ಮತ್ತು ಈ ಸಂಘಕ್ಕೆ ರೂ.10.00 ಕೋಟಿಗಳಷ್ಟು ಸಾಲ ಮಂಜೂರು ಮಾಡಿರುವುದು.

ಈ) 2018-19 ನೇ ಸಾಲಿನಲ್ಲಿ ಜಾರಿಯಲ್ಲಿದ್ದ ಘನ ರಾಜ್ಯ ಸರ್ಕಾರದ ರೂ.1,00,000=00ಗಳ ಮೊತ್ತದ ಕೃಷಿ ಅಲ್ಪಾವಧಿ ಸಾಲ ಮನ್ನಾ ಯೋಜನೆಯಲ್ಲಿ ಅವ್ಯವಹಾರ ಆಗಿರುವ ಬಗ್ಗೆ.

### ಮಾಹಿತಿ

ದಿನಾಂಕ: 01.07.2021 ರಿಂದ ದಿನಾಂಕ: 31.12.2021ರ ಅವಧಿಯಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಡಿ.ಸಿ.ಸಿ ಬ್ಯಾಂಕ್ ನಿ., ಕೋಲಾರ ಈ ಬ್ಯಾಂಕು ವಿ.ಎಸ್.ಎಸ್.ಎನ್ ಮುಖಾಂತರ ಮಹಿಳಾ ಸ್ವ-ಸಹಾಯ ಸಂಘಗಳಿಗೆ ನೀಡಿದ ಸಾಲಗಳ ವಿವರ ಕೆಳಗಿನಂತಿದೆ.

| ಜಿಲ್ಲೆ | ಸಹಕಾರ ಸಂಘಗಳ ಸಂಖ್ಯೆ | ಮಹಿಳಾ ಸ್ವ-ಸಹಾಯ ಗುಂಪುಗಳ ಸಂಖ್ಯೆ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| ಕೋಲಾರ | 37 | 1278 | 6184.43 |
| ಚಿಕ್ಕಬಳ್ಳಾಪುರ | 36 | 1031 | 4888.54 |
| ಒಟ್ಟು | 73 | 2309 | 11072.97 |

ಹೆಚ್ಚುವರಿಯಾಗಿ ಬಡ್ಡಿ ಕ್ಲೇಮು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
2016-17 ರಿಂದ 2020-21 ರ ಅವಧಿಯಲ್ಲಿ ನೀಡಿರುವ ಎಸ್.ಹೆಚ್.ಜಿ ಸಾಲ ವಸೂಲಾತಿ ಹಾಗೂ ವಸೂಲಾತಿ ಆಧಾರದಲ್ಲಿ ಬಡ್ಡಿ ಸಹಾಯಧನದ ಕ್ಲೇಮ್ ಬಿಲ್ಲುಗಳನ್ನು ಸರ್ಕಾರ ಹೊರಡಿಸಿರುವ ನಿಯಮಗಳನ್ವಯ ಕ್ಲೇಮ್ ಮಾಡಿರುವ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಕಲಂ 65 ರಡಿ ಪರಿವೀಕ್ಷಣೆಗೆ ಆದೇಶಿಸಲಾಗಿದೆ. ಪರಿವೀಕ್ಷಣೆಯು ಪ್ರಗತಿಯಲ್ಲಿದ್ದು, ವರದಿ ಆಧರಿಸಿ ನಿಯಮಾನುಸಾರ ಕ್ರಮವಿಡಲಾಗುವುದು.

ಬ್ಯಾಂಕಿನ ಕೆ.ಜಿ.ಎಫ್ ಶಾಖೆಯಲ್ಲಿ 2019-20 ನೇ ಸಾಲಿನಲ್ಲಿ ಪಶುಭಾಗ್ಯ ಫಲಾನುಭವಿಗಳ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಸಹಾಯಧನ ವಿತರಣೆಯಲ್ಲಿ ಅವ್ಯವಹಾರ ನಡೆದಿದೆ ಎಂಬ ದೂರಿನ ಬಗ್ಗೆ ಪರಿಶೀಲಿಸಲು ನಿಯೋಜಿಸಲ್ಪಟ್ಟ ಇಲಾಖಾಧಿಕಾರಿ ತಂಡವು ದಾಖಲೆಗಳನ್ನು ಪರಿಶೀಲಿಸಿ, ಫಲಾನುಭವಿಗಳನ್ನು ಸಂದರ್ಶಿಸಿ ವರದಿಯನ್ನು ಸಲ್ಲಿಸಿರುತ್ತಾರೆ. ವರದಿ ರೀತ್ಯ ಪಶುಭಾಗ್ಯ ಯೋಜನೆಯಡಿ ಫಲಾನುಭವಿಗಳಿಗೆ ಚೆಕ್ ಮುಖಾಂತರ ಸಹಾಯಧನದ ಮೊತ್ತವನ್ನು ವಿತರಣೆ ಮಾಡಿದ್ದು, ಅವ್ಯವಹಾರವಾಗಿರುವುದು ಕಂಡು ಬಂದಿರುವುದಿಲ್ಲ.

...2

ಸವೆನ್‌ಸ್ಟಾರ್ ಬಳಕೆದಾರರ ಸಹಕಾರ ಸಂಘ ನಿ.ಯಮಿತ, ಕೋಲಾರ ಮುಖ್ಯರಸ್ತೆ, ಬಂಗಾರಪೇಟೆ ಈ ಸಹಕಾರ ಸಂಘವನ್ನು ನೋಂದಣಿ ಮಾಡುವ ಪೂರ್ವ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಕೋಲಾರ ರವರ ಆದೇಶ ಸಂಖ್ಯೆ: ಎಆರ್.49/ನೋಂದಣಿ/ಸಿಆರ್.13/2019-20 ದಿನಾಂಕ: 18-06-2019 ರಲ್ಲಿ ಷೇರು ಸಂಗ್ರಹಣೆಗೆ ಆದೇಶಿಸಲಾಗಿದ್ದು, ಅದರಂತೆ, ಷೇರು ಸಂಗ್ರಹಿಸಿ ಸಂಘವನ್ನು ನೋಂದಣಿ ಮಾಡಲು ದಿನಾಂಕ: 19-06-2019 ರಲ್ಲಿ ಸಂಘದ ಮುಖ್ಯ ಪ್ರವರ್ತಕರ ಕೋರಿಕೆ ಮೇರೆಗೆ ಈ ಸಹಕಾರ ಸಂಘವನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕೋಲಾರ ರವರ ಆದೇಶ ಸಂಖ್ಯೆ: ನಂ: ಎಆರ್-49/ಆರ್‌ಜಿಎನ್/ಸಿಆರ್-12/52439/2019-20 ರೀತ್ಯ ದಿನಾಂಕ: 21.6.2019 ರಲ್ಲಿ ನೋಂದಣಿ ಮಾಡಲಾಗಿರುತ್ತದೆ.

ಬ್ಯಾಂಕಿನಿಂದ ಸವೆನ್ ಸ್ಟಾರ್ ಬಳಕೆದಾರರ ಸಹಕಾರ ಸಂಘ ನಿಯಮಿತ, ಬಂಗಾರಪೇಟೆ. ಈ ಸಂಘಕ್ಕೆ 2019-20ನೇ ಸಾಲಿನಲ್ಲಿ ರೂ.1000.00 ಲಕ್ಷಗಳ ನಗದು ನಂಬಿಕೆ ಸಾಲವನ್ನು ಅಕ್ಕಿ ಮತ್ತು ರಾಗಿ ಪ್ಲೋರ್ ಮಿಲ್ ಉದ್ದಿಮೆ ನಡೆಸಲು ದುಡಿಯುವ ಬಂಡವಾಳಕ್ಕೆ ಮಂಜೂರು ಮಾಡಲಾಗಿದ್ದು, ದಿನಾಂಕ:09.12.2021 ರಂದು ಬ್ಯಾಂಕಿಗೆ ಸಂಪೂರ್ಣವಾಗಿ ಮರುಪಾವತಿಸಿ ಬೇಬಾಕಿ ಪಡೆದಿದ್ದು, ಸಂಘದಿಂದ ಬ್ಯಾಂಕಿಗೆ ಯಾವುದೇ ಸಾಲ ಬಾಕಿ ಇರುವುದಿಲ್ಲ.

2018-19ನೇ ಸಾಲಿನಲ್ಲಿ ರೈತರಿಗೆ ರೂ.1.00 ಲಕ್ಷಗಳ ಅಲ್ಪಾವಧಿ ಬೆಳೆ ಸಾಲ ಮನ್ನಾ ಯೋಜನೆಯಡಿ ಸರ್ಕಾರ ರೂಪಿಸಿರುವ ಸಾಫ್ಟ್‌ವೇರ್‌ನಲ್ಲಿ ಕ್ಲೈಂ ಸಲ್ಲಿಸಿರುವ, ಸರ್ಕಾರದಿಂದ ಬಿಡುಗಡೆಯಾಗಿರುವ ಮತ್ತು ಬಿಡುಗಡೆಗೆ ಬಾಕಿ ಇರುವ ತಾಲ್ಲೂಕುವಾರು ವಿವರಗಳು ಕೆಳಕಂಡಂತಿರುತ್ತದೆ.

(ರೂ.ಲಕ್ಷಗಳಲ್ಲಿ)

| ತಾಲ್ಲೂಕಿನ ಹೆಸರು | ರೂ.1.00 ಲಕ್ಷ ಸಾಲ ಮನ್ನಾ ಯೋಜನೆಯಲ್ಲಿ ಕ್ಲೈಂ ಸಲ್ಲಿಸಿರುವ | | ಸರ್ಕಾರದಿಂದ ಬಿಡುಗಡೆಯಾಗಿರುವ | | ಸರ್ಕಾರದಿಂದ ಬಿಡುಗಡೆಗೆ ಬಾಕಿ ಇರುವ | | ಬಿಡುಗಡೆಗೆ ಬಾಕಿ ಇರುವ ಪೈಕಿ ಹಸಿರು ಪಟ್ಟಿಗೆ ಸೇರಿದ ವಿವರ (green list released) | | ತಾಂತ್ರಿಕ ದೋಷದಿಂದ ಹಸಿರು ಪಟ್ಟಿಗೆ ಬರಲು ಬಾಕಿ ಇರುವ ವಿವರ | |
|---|---|---|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| ಕೋಲಾರಜಿಲ್ಲೆ | | | | | | | | | | |
| ಕೋಲಾರ | 2981 | 2666.51 | 2943 | 2630.01 | 38 | 36.50 | 35 | 33.60 | 3 | 2.90 |
| ಮಾಲೂರು | 1328 | 1238.76 | 1289 | 1200.36 | 39 | 38.40 | 38 | 37.40 | 1 | 1.00 |
| ಬಂಗಾರಪೇಟೆ | 1335 | 1197.18 | 1326 | 1189.08 | 9 | 8.10 | 7 | 6.45 | 2 | 1.65 |
| ಕೆ.ಜಿ.ಎಫ್. | 1741 | 1621.41 | 1696 | 1576.41 | 45 | 45.00 | 42 | 42.00 | 3 | 3.00 |
| ಮುಳಬಾಗಿಲು | 1622 | 1353.59 | 1600 | 1332.54 | 22 | 21.05 | 19 | 18.05 | 3 | 3.00 |
| ಶ್ರೀನಿವಾಸಪುರ | 948 | 836.00 | 929 | 817.00 | 19 | 19.00 | 18 | 18.00 | 1 | 1.00 |
| ಒಟ್ಟು | 9955 | 8913.44 | 9783 | 8745.39 | 172 | 168.05 | 159 | 155.50 | 13 | 12.55 |

ದಿನಾಂಕ:10.07.2018ಕ್ಕೆ ಹೊರಬಾಕಿ ಇರುವ ಅಲ್ಪಾವಧಿ ಬೆಳೆ ಸಾಲದ ಪೈಕಿ ಒಂದು ಕುಟುಂಬಕ್ಕೆ ಗರಿಷ್ಠ ರೂ.1.00 ಲಕ್ಷದ ವರೆಗಿನ ಸಾಲವನ್ನು ಮನ್ನಾ ಮಾಡಿ ಸರ್ಕಾರ ಹೊರಡಿಸಿರುವ ಆದೇಶ ಸಂಖ್ಯೆ ಸಿಒ163 ಸಿಎಲ್‌ಎಸ್ 2018, ದಿನಾಂಕ:14.08.2018ರ ಆದೇಶದಲ್ಲಿನ ಷರತ್ತುಗಳನ್ನು ಮತ್ತು ಸಹಕಾರ

...3

ಸಂಘಗಳ ನಿಬಂಧಕರು ಕಾಲಕಾಲಕ್ಕೆ ಹೊರಡಿಸಿರುವ ಆದೇಶ/ಸುತ್ತೋಲೆಗಳನ್ನು ಪಾಲನೆ ಮಾಡಿ, ಸರ್ಕಾರ ರೂಪಿಸಿರುವ WWW.parihara.karnataka.gov.in/clws/pacs/ತಂತ್ರಾಂಶದಲ್ಲಿ ಸಾಲಮನ್ನಾ ಅರ್ಹತೆ ಇರುವ ರೈತರ ಮಾಹಿತಿಯನ್ನು ಅಳವಡಿಸಿದ ನಂತರ ಅರ್ಹ ಫಲಾನುಭವಿಗಳಿಗೆ Direct Benefit Transfer (DBT) ಮೂಲಕ ನೇರವಾಗಿ ರೈತರ ಖಾತೆಗಳಿಗೆ ಸಾಲಮನ್ನಾ ಮೊತ್ತ ಜಮಾ ಆಗಿರುತ್ತದೆ. ಸದರಿ ಯೋಜನೆಯಲ್ಲಿ ಅವ್ಯವಹಾರ ಪ್ರಕರಣ ವರದಿಯಾಗಿರುವುದಿಲ್ಲ.

ಸಂಖ್ಯೆ:ಸಿಒ 354 ಸಿಎಲ್ ಎಸ್ 2022

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು)